**ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ., ನ್ಯಾಯಾಲಯ.**

**ಹಿರೇಕೆರೂರು.**

**ಸಿ.ಸಿ.ನಂಬರ್ಃ 98/2019**

ಸಿಡಬ್ಲ್ಯೂಃ 1

ಪಿಡಬ್ಲ್ಯೂಃ 1

| | | |
|---|---|---|
| ಸಾಕ್ಷಿಯ ಹೆಸರು | : | ಸುಮಾ ಹನುಮಂತಪ್ಪ ಅವಿನ |
| ತಂದೆಯ ಹೆಸರು | : | ಹನುಮಂತಪ್ಪ |
| ವಯಸ್ಸು | : | 32 ವರ್ಷ |
| ಉದ್ಯೋಗ | : | ಡಬ್ಲ್ಯೂ.ಪಿ.ಸಿ., ಕೊಪ್ಪಳ ಕಂಟ್ರೋಲ್‌ರೂಮ್ |
| ವಾಸಸ್ಥಳ | : | ಕೊಪ್ಪಳ |

ಇಂದು ದಿನಾಂಕಃ 15.07.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ** ಮಾನ್ಯ ಎಪಿಪಿಯವರಿಂದಃ

ನಾನು ಮೇ 2018 ರಿಂದ 14.02.2021 ರವರಗೆ ರಟ್ಟಿಹಳ್ಳಿ ಪೋಲಿಸ್ ಠಾಣೆಯಲ್ಲಿ ಡಬ್ಲ್ಯೂ.ಪಿ. ಸಿ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

1. ಬೀಟ್ ಕರ್ತವ್ಯಕ್ಕಾಗಿ ಮಾವಿನತೋಪು ಗ್ರಾಮಕ್ಕೆ ಹೋಗಿರುತ್ತೇವೆ. ತಿಂಗಳಿಗೆ 2 ಸಾರಿ ಬೀಟ್ ಕರ್ತವ್ಯಕ್ಕೆ ಹೋಗುತ್ತೇವೆ. ದಿನಾಂಕಃ 21.07.2018 ರಂದು ಬೆಳಿಗ್ಗೆ 9-30 ಗಂಟೆ ಸುಮಾರಿಗೆ ಬೀಟ್ ಕರ್ತವ್ಯಕ್ಕೆ ಹೋಗಿದ್ದು, ಅಲ್ಲಿಯ ಆಂಜನೇಯ ದೇವಸ್ಥಾನಲ್ಲಿ ಜನರನ್ನು ಕರೆದು ಮಿಟೀಂಗ್ ಮಾಡಿದಾಗ ಅಲ್ಲಿಯ ಜನರು ಆಂಜನೇಯ ದೇವಸ್ಥಾನದಲ್ಲಿ ದಿನಾಂಕಃ 04.07.2018 ರಾತ್ರಿ 9-00 ಗಂಟೆಯಿಂದ 05.07.2018 ರ ಮುಂಜಾನೆ 7-30 ಗಂಟೆ ಅವಧಿಯಲ್ಲಿ ಕಾಣಿಕೆ ಡಬ್ಬಿ ಕಳುವು ಆಗಿರುತ್ತದೆ ಎಂದು ಹೇಳಿದರು. ಮುಂದುವರೆದು ಜನರು ಜನರು ಆ ಬಗ್ಗೆ ಚರ್ಚಿಸಿ ಹುಡುಕಲಾರಂಭಿಸಿದಾಗ ಸದರಿ ಕಾಣಿಕೆ ಡಬ್ಬಿಯು ದಂಡಗಿಹಳ್ಳಿಯ ರಸ್ತೆಯ ಬದಿಗೆ ಬಿದ್ದಿತ್ತು. ಅದರಲ್ಲಿರುವ ಸುಮಾರು 5 ರಿಂದ 8 ಸಾವಿರ ರೂ.ಗಳು ಕಳುವಾಗಿದ್ದವು ಎಂದು ಹೇಳಿರುತ್ತಾರೆ.

2. ಸದರಿ ಕಾಣಿಕೆ ಡಬ್ಬಿಯನ್ನು ಮತ್ತೆ ದೇವಸ್ಥಾನದಲ್ಲಿ ತಂದು ಇಟ್ಟಿರುತ್ತೇವೆ ಎಂದು ಹೇಳಿರುತ್ತಾರೆ. ಜನರು ಅದೇ ದಿನ ವಿಷಯವನ್ನು ಠಾಣೆಗೆ ತಿಳಿಸಿದ್ದು, ಬೀಟ್ ಕರ್ತವ್ಯಕ್ಕೆ ಹೋದಾಗ ಸದರಿ ವಿಷಯವನ್ನು ಮತ್ತೆ ಚರ್ಚಿಸಲಾಗಿ, ನಾವು ಕಮೀಟಿಯ ಚಾಸಾ-12 ಮತ್ತು 13 ರವರಿಗೆ ದೂರನ್ನು ಕೊಡಲು ಹೇಳಲಾಗಿ, ಅವರು ಹಣ ಸಿಗುವುದಿಲ್ಲ ಎಂದು ಸುಮ್ಮನೆ ಇದ್ದರು. ನಂತರ ಸದರಿ ವಿಷಯವನ್ನು ನಾನು ನನ್ನ ಮೇಲಾಧಿಕಾರಿಗಳಿಗೆ ತಿಳಿಸಿದಾಗ ಅವರು ನನಗೆ ಫಿರ್ಯಾದಿ ನೀಡಲು

ತಿಳಿಸಿದ್ದರಿಂದ ನಾನು ಫಿರ್ಯಾದಿ ಸಲ್ಲಿಸಿರುತ್ತೇನೆ. ಸಾಕ್ಷಿಯು ಸದರಿ ದೂರಿನ ಮೇಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದೂರನ್ನು ನಿಪಿ-1 ಹಾಗೂ ಅದರ ಮೇಲಿರುವ ಸಹಿಯನ್ನು ನಿಪಿ-1(ಎ) ಎಂದು ಗುರುತಿಲಸಾಯಿತು.

3. ದಿನಾಂಕಃ 10.09.2018 ರಂದು ನಾನು ಚಾಸಾ-30 ರವರಿಗೆ ನಾನು ಠಾಣೆಯಲ್ಲಿ ಪುನರ್ ಹೇಳಿಕೆಯನ್ನು ನೀಡಿರುತ್ತೇನೆ. ಆಗ ಚಾಸಾ-30 ರವರು ಆರೋಪಿತರು ಅದೇ ದಿನ ಹಿರೇಕೆರೂರ ವ್ಯಾಪ್ತಿಯ ಚಿಕ್ಕಮತ್ತೂರ ಮತ್ತು ಗಂಗಾಪುರ ಗ್ರಾಮದಲ್ಲಿ ಕಳ್ಳತನ ಮಾಡಿದ್ದು, ಅದೇ ದಿನ ಮಾವಿನತೋವಿನಲ್ಲಿ ಕಳ್ಳತನ ಮಾಡಿರುವುದನ್ನು ಹಿರೇಕೆರೂರು ಪೊಲೀಸ್ ಠಾಣೆಯಲ್ಲಿ ಒಪ್ಪಿಕೊಂಡಿದ್ದರಿಂದ ಆರೋಪಿತರನ್ನು ಪೊಲೀಸ್ ಕಸ್ಟಡಿಗೆ ತೆಗೆದುಕೊಂಡಿರುವುದಾಗಿ ಹೇಳಿದರು. ಆಗ ಆರೋಪಿತರನ್ನು ವಿಚಾರಿಸಿದಾಗ ಅವರು ಮಾವಿನತೋಪು ಗ್ರಾಮದಲ್ಲಿ ಕಳ್ಳತನ ಮಾಡಿರುವ ಹಣವನ್ನು ನಾವು ಮೂವರು ಹಂಚಿಕೊಂಡಿರುತ್ತೇವೆ ಎಂದು ಒಪ್ಪಿಕೊಂಡಿರುತ್ತಾರೆ. ಸದರಿ ಆರೋಪಿತರ ಹೆಸರನ್ನು ಕೇಳಲಾಗಿ 1 ನೇ ಆರೋಪಿ ಸೈಯದ್ ಇಸ್ರಾರ, 2 ನೇ ಆರೋಪಿ ಅಸಾದುಲ್ಲಾ ಮತ್ತು 3 ನೇ ಆರೋಪಿ ಸಂತೋಷಕುಮಾರ ಎಂದು ಹೇಳಿರುತ್ತಾರೆ. ಈ ಬಗ್ಗೆ ನಾನು ಆ ದಿನ ಪುನರ್ ಹೇಳಿಕೆ ನೀಡಿರುತ್ತೇನೆ.

(ಮುಂದುವರೆದ ಮುಖ್ಯವಿಚಾರಣೆಗೆ ಮಾನ್ಯ ಎಪಿಪಿಯವರು ಸಮಯಾವಕಾಶವನ್ನು ಕೋರಿದ್ದು ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

Sd/-

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.